ರಾಜ್ಯದಲ್ಲಿ ಕೊರೊನಾ ಕೇಕೆ ಇನ್ನೂ ನಿಂತಿಲ್ಲ. ಸೋಂಕು ಲಕ್ಷ ಮೀರಿದ್ದರೆ, ಸಾವಿನ ಸಂಖ್ಯೆ 10 ಸಾವಿರ ಮೀರಿದೆ. ಆದರೆ, ಸೋಂಕಿತರಿಗೆ ಚಿಕಿತ್ಸೆ, ಕೊರೊನಾ ಬಗ್ಗೆ ಅರಿವು, ಸ್ವಚ್ಛತೆ, ಪೌರಸೇವೆ ನೀಡುವಾಗ ಹುತಾತ್ಮರಾದ ವಾರಿಯರ್ಸ್ ಸಂಖ್ಯೆ 500ಕ್ಕೂ ಹೆಚ್ಚು. ಈ ಕುರಿತು ಉದಯವಾಣಿ ಸಮಗ್ರ ಮಾಹಿತಿ ಕಲೆ ಹಾಕಿದೆ.

# ಹುತಾತ್ಮರು 500+

## ಆದರೆ, ಪರಿಹಾರ ಸಿಕ್ಕಿದ್ದು ಒಬ್ಬರ ಕುಟುಂಬಕ್ಕೆ ಮಾತ್ರ!

### ವೈದ್ಯರು




ವೈದ್ಯೋ ನಾರಾಯಣೋ ಹರಿ ಎಂಬ ಮಾತಿನಂತೆ ಕೊರೊನಾ ವಿರುದ್ಧದ ಹೋರಾಟದಲ್ಲಿ ಜನರ ಪಾಲಿಗೆ ಇವರೇ ದೈವೀ ಸ್ವರೂಪಿಗಳು. ಆದರೆ, ಸೋಂಕಿನಿಂದ ಪ್ರಾಣ ತೆತ್ತ ವೈದ್ಯರ ಸಂಖ್ಯೆ 60. ಇದು ವೈದ್ಯಕೀಯ ಸಂಘ ನೀಡಿರುವ ಮಾಹಿತಿ. ಆರೋಗ್ಯ ಇಲಾಖೆ ಬಳಿ ಕೇವಲ 9 ಮಂದಿ ಸಾವನ್ನಪ್ಪಿರುವ ಮಾಹಿತಿ ಇದೆ.

### ನರ್ಸ್‌ಗಳು




ಇನ್ನು ವೈದ್ಯರ ಜತೆಗೆ ಬೆನ್ನೆಲುಬಾಗಿ ನಿಂತವರು ನರ್ಸ್‌ಗಳು ಅಥವಾ ಅರೆ ವೈದ್ಯಕೀಯ ಸಿಬ್ಬಂದಿ. ಇವರೂ ತಮ್ಮ ಜೀವ ಪಣಕ್ಕಿಟ್ಟು ಕೊರೊನಾ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ. ಇವರಲ್ಲಿ 19 ನರ್ಸ್‌ಗಳು, ಒಬ್ಬ ವಾರ್ಡ್ ಬಾಯ್ ಸಾವನ್ನಪ್ಪಿದ್ದಾರೆ.

### ಪೊಲೀಸರು





ಲಾಕ್‌ಡೌನ್ ವೇಳೆಯೂ ಸೇರಿದಂತೆ ಸೋಂಕು ಹರಡುವಿಕೆ ತಡೆಗಟ್ಟುವಲ್ಲಿ, ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಪೊಲೀಸರ ಪಾತ್ರ ಹಿರಿದು. ಅಂದರೆ, ಆರೋಪಿಗಳ ಬಂಧನ, ನ್ಯಾಯಾಲಯಕ್ಕೆ ಹಾಜರು, ಲಾಕ್‌ಡೌನ್ ಬಂದೋಬಸ್ತ್, ರಾತ್ರಿಪಾಳಿಗೆ ನಿಯೋಜನೆ ವೇಳೆ ಸೋಂಕು ತಗುಲಿ ಮೃತರಾಗಿದ್ದಾರೆ.

### ಪೌರ ಕಾರ್ಮಿಕರು




ಕೊರೊನಾ ಕಾಲದಲ್ಲಿ ಅಂಜದೆ ಕೆಲಸ ಮಾಡಿದವರಲ್ಲಿ ಪೌರ ಕಾರ್ಮಿಕರೂ ಮೊದಲಿಗರು. ಇವರಿಗೂ ಕೊರೊನಾ ಸೋಂಕು ಬಿಡಲಿಲ್ಲ, ಇಲ್ಲೂ 4 ಪೌರ ಕಾರ್ಮಿಕರು, 4 ಗುತ್ತಿಗೆ ಪೌರ ಕಾರ್ಮಿಕರು ಹಾಗೂ ಇಬ್ಬರು ನೋಡಲ್ ಅಧಿಕಾರಿಗಳು ಬಲಿಯಾಗಿದ್ದಾರೆ.






### ಸರ್ಕಾರದ ಬಳಿ ಮಾಹಿತಿಯೇ ಇಲ್ಲ

ಕರ್ತವ್ಯದಲ್ಲಿದ್ದಾಗಲೇ ಸೋಂಕಿನಿಂದ ಮೃತಪಟ್ಟವರ ಸಂಖ್ಯೆ ಶೇ.90. ಉಳಿದಂತೆ ಶೇ.10 ಮಂದಿ ಹೃದಯಾಘಾತ, ಅಪಘಾತ ಹಾಗೂ ಇತರೆ ಕಾಯಿಲೆಗಳಿಗೆ ತುತ್ತಾಗಿ ಪ್ರಾಣ ಕಳೆದುಕೊಂಡಿದ್ದಾರೆ. ಆದರೆ, ಸರ್ಕಾರದ ಬಳಿ ಖಚಿತ ಮಾಹಿತಿ ಇಲ್ಲ. ವಿವಿಧ ಇಲಾಖೆಗಳು ಹಾಗೂ ಸಂಘ-ಸಂಸ್ಥೆಗಳಿಂದ 'ಉದಯವಾಣಿ' ಈ ಮಾಹಿತಿ ಕಲೆ ಹಾಕಿದೆ.

### ಉಳಿದದ್ದು ಯಾವಾಗ?

ರಾಜ್ಯ ಸರ್ಕಾರ ಇದುವರೆಗೆ ಒಬ್ಬರಿಗೆ ಮಾತ್ರ 30 ಲಕ್ಷ ರೂ. ಪರಿಹಾರ ನೀಡಿದೆ. ಕರ್ತವ್ಯ ನಿರ್ವಹಣೆ ವೇಳೆ ಮೃತಪಟ್ಟ ಉಪವಿಭಾಗಾಧಿಕಾರಿ (ಪ್ರೊಬೆಷನರಿ) ಎಚ್.ಎಂ. ಗಂಗಾಧರಯ್ಯ ಕುಟುಂಬಕ್ಕೆ ಸರ್ಕಾರ ಕೋವಿಡ್ ನಿಧಿಯಿಂದ 30 ಲಕ್ಷ ರೂ. ಪರಿಹಾರ ನೀಡಲಾಗಿದೆ. ಉಳಿದಂತೆ ಆಯಾ ಇಲಾಖೆಗಳ ವತಿಯಿಂದಲೇ ಪರಿಹಾರ ವಿತರಿಸುವಂತೆ ಸೂಚಿಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಪೌರ ಕಾರ್ಮಿಕರಿಗೆ, ಪಾಲಿಕೆಯ ಕಾಯಂ ಸಿಬ್ಬಂದಿಗೆ ಪಾಲಿಕೆಯಿಂದ ಹತ್ತು ಲಕ್ಷ ರೂ. ಪರಿಹಾರ ನೀಡಲಾಗಿದ್ದು 30 ಲಕ್ಷ ರೂ. ಪರಿಹಾರ ವಿಚಾರದಲ್ಲಿ ಪ್ರಕ್ರಿಯೆ ನಡೆಯುತ್ತಿದೆ. ರಾಜ್ಯ ಸರ್ಕಾರದಿಂದ ಎರವಲು ಸೇವೆಯಡಿ ಪಾಲಿಕೆಗೆ ನಿಯೋಜನೆಗೊಂಡು ಕೊರೊನಾ ಕರ್ತವ್ಯದಲ್ಲಿದ್ದಾಗ ಮೃತಪಟ್ಟವರಿಗೆ ಪರಿಹಾರವನ್ನು ಮಾತ್ರ ಇಲಾಖೆ ಭರಿಸುವಂತೆ ಸೂಚಿಸಲಾಗಿದೆ. ▶ 7ನೇ ಪುಟಕ್ಕೆ

### ಚಾಲಕ, ನಿರ್ವಾಹಕರು




ರಾಜ್ಯದ ಎಲ್ಲಾ ಸಾರಿಗೆ ಇಲಾಖೆಗಳು ಸೇರಿ 96 ಚಾಲಕರು ಮತ್ತು ನಿರ್ವಾಹಕರು ಸೋಂಕಿಗೆ ಬಲಿಯಾಗಿದ್ದಾರೆ. ಲಾಕ್‌ಡೌನ್ ವೇಳೆ ಒಂದೆರಡು ಪ್ರಕರಣಗಳಾಗಿದ್ದರೆ, ಅನ್‌ಲಾಕ್ ಅವಧಿಯಲ್ಲಿ ಹೆಚ್ಚಿನ ಸಾವು ನೋವುಗಳಾಗಿವೆ. ಕೊರೊನಾದಿಂದ ಮೃತಪಟ್ಟ ಸಾರಿಗೆ ನೌಕರರನ್ನು ಕೊರೊನಾ ವಾರಿಯರ್ಸ್ ಎಂದು ಪರಿಗಣಿಸಿ ಪರಿಹಾರ ನೀಡಲಾಗುವುದು ಎಂದು ಡಿಸಿಎಂ ಲಕ್ಷ್ಮಣ ಸವದಿ ಹೇಳಿದ್ದಾರೆ.

### ಶಿಕ್ಷಕರು/ಉಪನ್ಯಾಸಕರು




ಶಿಕ್ಷಣ ಇಲಾಖೆಯಲ್ಲಿ ಕೊರೊನಾ ಪ್ರಥಮ ಹಾಗೂ ದ್ವಿತೀಯ ಸಂಪರ್ಕಿತರ ಪತ್ತೆ ಸೇರಿ ಇತರೆ ಸಮೀಕ್ಷೆ ಕಾರ್ಯಗಳಿಗೆ ನಿಯೋಜಿಸಿದ್ದ ಶಿಕ್ಷಕರು, ವಿದ್ಯಾಗಮ ಸಂದರ್ಭ , ಮೌಲ್ಯಮಾಪನ ಕಾರ್ಯದ ನಿಯೋಜನೆ ವೇಳೆ ಒಟ್ಟು 200 ಶಿಕ್ಷಕರು, 35 ಉಪನ್ಯಾಸಕರು ಹುತಾತ್ಮರಾಗಿದ್ದಾರೆ.

### ಆಶಾ ಕಾರ್ಯಕರ್ತೆಯರು




ಕೊರೊನಾ ತಡೆ ವಿಚಾರದಲ್ಲಿ ಮತ್ತು ಸೋಂಕಿನ ಪರೀಕ್ಷೆ ಪ್ರಕ್ರಿಯೆಯಲ್ಲಿ ಆಶಾ ಕಾರ್ಯಕರ್ತೆಯರ ಕೆಲಸ ಮರೆಯುವಂತಿಲ್ಲ. ಹಳ್ಳಿ ಹಳ್ಳಿಗಳಲ್ಲೂ ಇವರೇ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡುತ್ತಿದ್ದಾರೆ. ಇವರಲ್ಲೂ 10 ಮಂದಿ ಕರ್ತವ್ಯದಲ್ಲಿದ್ದಾಗಲೇ ಮೃತರಾಗಿದ್ದಾರೆ. ಸೋಂಕಿನಿಂದ ಒಬ್ಬರು ಮೃತರಾಗಿದ್ದರೆ, ಇತರೆ ಕಾರಣಗಳಿಂದ 9 ಮಂದಿ ಸಾವನ್ನಪ್ಪಿದ್ದಾರೆ ಎಂದು ಮೂಲಗಳು ತಿಳಿಸಿವೆ.

18/10/20

# ಹುತಾತ್ಮರು 500+


## ಯಾರಿಗೆ ಪರಿಹಾರ? ಯಾರಿಗಿಲ್ಲ?

**1ನೇ ಪುಟದಿಂದ ▸** ಗುತ್ತಿಗೆ ಪೌರ ಕಾರ್ಮಿಕರಿಗೆ ಪರಿಹಾರ ಸೌಲಭ್ಯ ಅನ್ವಯಿಸುವುದಿಲ್ಲ. ಕೊರೊನಾ ವಾರಿಯರ್ಸ್‌ಗಳಾಗಿ ಮೃತ ಪಟ್ಟ ಇಲಾಖೆಯ ಅಧಿಕಾರಿ–ಸಿಬ್ಬಂದಿಗೆ ಕೊರೊನಾ ಪರಿಹಾರ 30 ಲಕ್ಷ ರೂ. ಜತೆಗೆ ಪೊಲೀಸ್ ಇಲಾಖೆಯಿಂದ ದೊರೆಯುವ ಎಲ್ಲ ರೀತಿಯ ಪರಿಹಾರ ಸೌಲಭ್ಯಗಳು ದೊರೆಯುತ್ತದೆ ಎಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ(ಆಡಳಿತ) ಡಾ ಎಂ.ಎ.ಸಲೀಂ ಹೇಳಿದ್ದಾರೆ.

### ಯಾರು ಯಾರು ವಾರಿಯರ್ಸ್?

ವೈದ್ಯರು, ನರ್ಸ್‌ಗಳು, ಆಶಾ ಕಾರ್ಯಕರ್ತೆಯರು, ಪೊಲೀಸರು, ಅಗ್ನಿಶಾಮಕ ದಳ ಸಿಬ್ಬಂದಿ, ಶಿಕ್ಷಣ ಇಲಾಖೆ ಸಿಬ್ಬಂದಿ, ಪೌರ ಕಾರ್ಮಿಕರು, ಸಾರಿಗೆ ಇಲಾಖೆ ಸಿಬ್ಬಂದಿ.

- ಕೋವಿಡ್ ಸೇವೆಗೆ ರಾಜ್ಯ ಸರ್ಕಾರ ಆರೋಗ್ಯ ಇಲಾಖೆ ಜತೆ ಜತೆಗೆ ಶಿಕ್ಷಣ, ಸಾರಿಗೆ, ಕಂದಾಯ ಸೇರಿ ಹಲವಾರು ಇಲಾಖೆಗಳಿಂದ ಸಾವಿರಾರು ಅಧಿಕಾರಿ, ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಕರ್ತವ್ಯದಲ್ಲಿದ್ದಾಗಲೇ ಯಾರಾದರೂ ಮೃತಪಟ್ಟರೆ ಇವರನ್ನೂ ಕೊರೊನಾ ವಾರಿಯರ್ಸ್ ಎಂದೇ ಪರಿಗಣಿಸಿ ಪರಿಹಾರ ನೀಡಲಿದೆ.
- ಕೋವಿಡ್ ಕರ್ತವ್ಯ ನಿರ್ವಹಣೆಯಲ್ಲಿ ಕೊರೊನಾದಿಂದ ಮೃತಪಟ್ಟರೆ 30 ಲಕ್ಷ ರೂ. ಪರಿಹಾರ
- ಸರ್ಕಾರಿ ನೌಕರ ತನ್ನ ಜವಾಬ್ದಾರಿ ನಿರ್ವಹಣೆ ಸಂದರ್ಭದಲ್ಲಿ ಕೋವಿಡ್ ಕಾಣಿಸಿಕೊಂಡರೆ ಅದರ ಚಿಕಿತ್ಸಾ ವೆಚ್ಚವನ್ನಷ್ಟೇ ಸರ್ಕಾರ ಭರಿಸಲಿದ್ದು, 30 ಲಕ್ಷ ರೂ. ಪರಿಹಾರಕ್ಕೆ ಅರ್ಹತೆ ಇರುವುದಿಲ್ಲ.
- ಕೋವಿಡ್ ಕರ್ತವ್ಯ ನಿರ್ವಹಣೆಗೆ ನಿಯೋಜನೆಗೊಂಡು ಕೋವಿಡ್ ಬದಲಿಗೆ ಬೇರೆ ಕಾರಣಕ್ಕೆ ಮೃತಪಟ್ಟರೆ ಅವರಿಗೂ ಪರಿಹಾರ ಅನ್ವಯವಾಗದು.





“ಕೊರೊನಾ ತಡೆ ಕಾರ್ಯದಲ್ಲಿ ತೊಡಗಿಸಿ ಕೊಂಡು ಜೀವತೆತ್ತ ‘ಕೊರೊನಾ ವಾರಿಯರ್ಸ್’ಗೆ ಪರಿಹಾರ ನೀಡುವ ವಿಚಾರದಲ್ಲಿ ಸರ್ಕಾರ ಬದ್ಧವಾಗಿದೆ. ಆಯಾ ಇಲಾಖೆಗಳ ಮಾಹಿತಿ ಆಧರಿಸಿ ಹಂತ ಹಂತವಾಗಿ ಪರಿಹಾರ ವಿತರಣೆ ಪ್ರಕ್ರಿಯೆ ನಡೆಯಲಿದೆ.

• ಡಾ.ಸಿ.ಎನ್.ಅಶ್ವತ್ಥನಾರಾಯಣ, ಡಿಸಿಎಂ